## ಗುಂಜನ್ ಸಕ್ಸೇನಾ

ಸೆ. 10ರ ಸಂಚಿಕೆಯಲ್ಲಿ 'ಗುಂಜನ್ ಸಕ್ಸೇನಾ' ಲೇಖನದಲ್ಲಿ ನೇಮಿಚಂದ್ರ ಅವರು ತಮ್ಮ ಎಂದಿನ ಆಕರ್ಷಕ ಶೈಲಿಯ ವಿವರಣೆ ಕೊಟ್ಟಿದ್ದಾರೆ. ಪ್ರತಿಯೊಂದು ಅಂಶವನ್ನೂ ಕೂಲಂಕಷವಾಗಿ ವಿವೇಚಿಸಿದ್ದಾರೆ. ಮಹಿಳೆಯರು ಅನುಭವಿಸುವ ಸಮಸ್ಯೆಗಳು, ಅವಕಾಶಗಳು, ನಡೆದ ಚರ್ಚೆಗಳು ಎಲ್ಲದರ ಮೇಲೂ ಬೆಳಕು ಚೆಲ್ಲಿರುವ ಈ ಲೇಖನ ವೈಮಾನಿಕ ಕ್ಷೇತ್ರದಲ್ಲಿ ದುಡಿಯುತ್ತಿರುವ ಎಲ್ಲ ಮಹಿಳೆಯರಿಗೆ ಅರ್ಪಿತವಾದ ಭಾವ.

—ಸುಬ್ಬಲಕ್ಷ್ಮಿ ಹೆಚ್.ಕೆ. ಕೋಲಾರ



ಹೆಣ್ಣುಮಕ್ಕಳು ಎದುರಿಸುವ ಸವಾಲುಗಳನ್ನು, ಸಮಾಜದ ಕೊರತೆಯನ್ನು ಲೇಖನ ಎತ್ತಿ ತೋರಿಸುತ್ತದೆ. ಆದರೆ ಮಹಿಳೆಯರು ಎದೆಗುಂದದೇ ಮುಂದೆ ಬರಬೇಕು.

—ನರಸಿಂಹ ರಾವ್, ಬೆಂಗಳೂರು

ಲೇಖನ ಯುದ್ಧಭೂಮಿಯನ್ನು ಪ್ರವೇಶಿಸಿದ ಮಹಿಳೆಯರ ಸಾಧನೆ, ಸಮಸ್ಯೆ, ಹಿರಿಮೆ ಕುರಿತಾಗಿ ವಾಸ್ತವ ನೆಲೆಗಟ್ಟಿನಲ್ಲಿ ಬೆಳಕು ಬೀರುತ್ತಿದೆ. ಸಿನಿಮಾದ ಬಗೆಗಿನ ಇನ್ನಿತರ ವಾದವಿವಾದಗಳು ಏನೇ ಇರಲಿ, ನೇಮಿಚಂದ್ರರು ಪುರುಷಕ್ಷೇತ್ರವೇ ಆಗಿದ್ದಂಥ ವಾಯುಪಡೆಗೆ 'ಸ್ತ್ರೀ ಸ್ಪರ್ಶ' ನೀಡಿದ ಸಾಹಸಿ ಹುಡುಗಿಯರ ಹೋರಾಟವನ್ನು ಯಥಾರ್ಥವಾಗಿ ನಿರೂಪಿಸಿದ್ದಾರೆ. ಎಂದಿನಂತೆ 'ಸುಧಾ' ವೈವಿಧ್ಯಮಯ ಲೇಖನಗಳೊಂದಿಗೆ ಮನರಂಜನೆಯೊಂದಿಗೆ ಚಿಂತನೆಗೂ ಅವಕಾಶ ನೀಡಿದೆ.

—ವಿದ್ಯಾ ಶಿರಹಟ್ಟಿ, ಧಾರವಾಡ

ಗುಂಜನ್ ಸಕ್ಸೇನ ಅವರ ಬದುಕು ಮತ್ತು ವೃತ್ತಿ ಬದುಕಿನ ಚಿತ್ರಣಗಳನ್ನು ಸಚಿತ್ರವಾಗಿ ತಿಳಿಸಿರುವುದು ಅತ್ಯುಪಯುಕ್ತವಾಗಿದೆ. ಪುರುಷ ಕೇಂದ್ರಿತ ಸೇನಾ ವ್ಯವಸ್ಥೆಗೆ ಮಹಿಳೆಯರ ಸೇರ್ಪಡೆ ಮತ್ತವರ ವಾಯುಪಡೆಯಲ್ಲಿನ ಹೋರಾಟ ಇಂದಿನ ಯುವತಿಯರಿಗೆ ಸ್ಫೂರ್ತಿದಾಯಕ.

—ಜಯಮಂಗಲ ಚಂದ್ರಶೇಖರ್, ಕೋಲಾರ ಜಿಲ್ಲೆ

ಸೇನೆಯಲ್ಲಿ ಮಹಿಳೆಯರ ಸೇರ್ಪಡೆ ಹಾಗೂ ಶ್ರೀವಿದ್ಯಾ ಹಾಗೂ ಗುಂಜನ್ ಸಕ್ಸೇನ ಅವರ ಕತೆ ಕೇಳಿ ಸಂತಸವಾಯಿತು. ಮಹಿಳೆಯರು ಇದರಿಂದ ಸತ್ಪ್ರೇರಣೆ ಪಡೆಯಲಿ.

—ಅಲ್ಲಮಪ್ರಭು ಬೆಟ್ಟದೂರ

## ಯಾಕೂಬ್ ಮೇಷ್ಟ್ರ ಆಡಾಡ್ತಾ ಗಣಿತ

ಸೆ. 10ರ ಸಂಚಿಕೆಯಲ್ಲಿ ರಾಜಲಕ್ಷ್ಮಿ ಕೋಡಿಬೆಟ್ಟು ಬರೆದ 'ಯಾಕೂಬ್ ಮೇಷ್ಟ್ರ' ಕುರಿತ ಲೇಖನ ಚೆನ್ನಾಗಿತ್ತು. ಶಿಕ್ಷಕರಾಗಿ ಅವರ ಸೇವೆಯ ರಜತಮಹೋತ್ಸವ ವರ್ಷದಲ್ಲಿ ರಾಷ್ಟ್ರ ಪ್ರಶಸ್ತಿ ದೊರಕಿರುವುದು ಅವರ ಸೇವೆ ಸಾಧನೆಗೆ ಸಂದ ಗೌರವವಾಗಿದೆ.

—ಆರ್.ಯನ್. ಪೂವಣಿ, ಉಜಿರೆ

'ಯಾಕೂಬ್ ಮೇಷ್ಟ್ರ ಆಡಾಡ್ತಾ ಗಣಿತ' ಲೇಖನ ಬಹಳ ಚೆನ್ನಾಗಿದೆ. ಕಬ್ಬಿಣದ ಕಡಲೆ ಎಂದು ಪರಿಗಣಿತವಾಗಿರುವ ಗಣಿತದ ಪ್ರಯೋಗಶಾಲೆಯನ್ನು ಆರಂಭಿಸಿ, ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವ ಶ್ರಮ ಮೆಚ್ಚತಕ್ಕದ್ದು.

—ಸತ್ಯವತಿ ರಾಘವೇಂದ್ರ, ಕುಳಿಹಿತ್ತಲು

ಸುಂದರವಾದ ಲೇಖನ. ಸಾಧಾರಣವಾಗಿ 'ಕಬ್ಬಿಣದ ಕಡಲೆ' ಎನಿಸುವ ಗಣಿತವನ್ನು ಸ್ವಾರಸ್ಯವಾಗಿ ಕಲಿಸುವ ಮೇಷ್ಟ್ರಿಗೆ ನಮನಗಳು.

—ಶಾಂತಾರಾಮ್ ಕೆ.ಆರ್., ಬೆಂಗಳೂರು

## ಮಹಾನಾಯಕ

ಸೆ.3ರ ಸಂಚಿಕೆಯಲ್ಲಿ ರಾಘವೇಂದ್ರ ತೊಗರ್ಸಿ ಅವರು ಬರೆದ 'ಮಹಾನಾಯಕ' ಧಾರಾವಾಹಿಯ ಕುರಿತ ಬರಹ ಚೆನ್ನಾಗಿತ್ತು. ಈ ಧಾರಾವಾಹಿ ತುಂಬ ಚೆನ್ನಾಗಿದೆ. ಎಲ್ಲ ಮಕ್ಕಳೂ ನೋಡಲೇಬೇಕಾದ ಧಾರಾವಾಹಿ ಇದು.

—ಜಯ್ ಶಾನ್

## ಮಾದರಿಯಾದ ಕಾಂಪೋಸ್ಟ್ ಘಟಕ

ಸೆ. 10 ರ ಸಂಚಿಕೆಯಲ್ಲಿನ ಭಾರತಿ ಎ. ಕೊಪ್ಪ ಬರೆದ 'ಶಾಲೆಗಳಲ್ಲಿ ಕಾಂಪೋಸ್ಟ್ ಗೊಬ್ಬರ ತಯಾರಿಕೆಯ ಪ್ರಾಯೋಗಿಕ ಪಾಠ' ಲೇಖನ ಬಹಳ ಚೆನ್ನಾಗಿದೆ. ಚಿಕ್ಕಮಗಳೂರಿನ ಕೊಪ್ಪ ತಾಲ್ಲೂಕಿನ ಹರಂದೂರು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುವ ಸರ್ಕಾರಿ ಶಾಲೆಗಳು ಪರಿಸರ ಕಾಳಜಿಗೆ ಮಾದರಿಯಾಗಿವೆ.

—ಪರಶುರಾಮ ಗಡ್ಡಿ, ಕೊಪ್ಪಳ

ಸೆ.30 ರಂದು ಪ್ರಕಟವಾದ ಘನಶ್ಯಾಮ ಡಿ.ಎಂ. ಅವರ 'ಷೇರು ಮಾರುಕಟ್ಟೆಯಲ್ಲಿ ವಿಂಡೋ ಷಾಪಿಂಗ್' ಲೇಖನ ಚೆನ್ನಾಗಿತ್ತು. ವಿಷಯವಸ್ತುವನ್ನು ಉದಾಹರಣೆ ಸಮೇತ ವಿವರಿಸಿದ್ದಾರೆ. ಲೇಖನದ ಭಾಷೆಯೂ ಸರಳ ಮತ್ತು ಸ್ಪಷ್ಟವಾಗಿತ್ತು.

—ಕಿರಣ್ ಬೆಳವನಕಿ, ಹುಬ್ಬಳ್ಳಿ

## ಎಕ್ಸ್ಟ್ರಾ ನಟಿಯ ಕೊನೆಯ ಪಾತ್ರ

ಸೆ. 10ರ ಸಂಚಿಕೆಯಲ್ಲಿ ಪ್ರಕಟವಾದ ಟಿ.ಆರ್. ಉಷಾರಾಣಿ ಅವರ 'ಎಕ್ಸ್ಟ್ರಾ ನಟಿಯ ಕೊನೆಯ ಪಾತ್ರ' ಮನಕಲಕುವ ಕತೆ. ಕತೆಯ ಪಾತ್ರ, ಬೆಳವಣಿಗೆ, ಶೈಲಿ ಮನಸ್ಸು ತಟ್ಟುತ್ತದೆ. ಬಹಳಷ್ಟು ಎಕ್ಸ್ಟ್ರಾ ನಟಿಯರ ಬದುಕು ಹೆಚ್ಚು ಕಮ್ಮಿ ಲೇಖಕಿ ವರ್ಣಿಸಿರುವಂತೆಯೇ ಇದೆ. ಯಾರೂ ತೆಗೆದುಕೊಳ್ಳದ ಪಾತ್ರವನ್ನು ಆರಿಸಿಕೊಂಡು ಚಿತ್ರಿಸಿರುವ ಲೇಖಕಿಯ ಪ್ರಯತ್ನ ಮೆಚ್ಚತಕ್ಕದ್ದು. ತಮ್ಮ ವಿಶ್ವಾಸದ

—ಕೆ ರವಿ ಶರ್ಮ

ಉಷಾರಾಣಿ ತಮ್ಮ ಕಥೆಗೆ ಆರಿಸಿಕೊಂಡ ವಸ್ತು ತುಂಬ ಪರಿಣಾಮಕಾರಿಯಾಗಿದೆ. ಅದು ಇಂದಿನ ಯುವಪೀಳಿಗೆಯ ಸಮಸ್ಯೆಯೂ ಹೌದು. ಬಾಡಿಗೆ ತಾಯಿ ಆಗುವುದು ನಿಜಕ್ಕೂ ವೇದನಾದಾಯಕ ಸಂಗತಿ.

—ರಮೇಶ್ ನಂಜುಂಡಯ್ಯ, ಜಯಲಕ್ಷ್ಮಿ ಉಪಾಧ್ಯಾಯ

ಚಿತ್ರರಂಗದಲ್ಲಿ ಬದುಕು ಕಟ್ಟಿಕೊಳ್ಳಲು ಬರುವ ನಟಿಯರು. ಅವರು ನಾಯಕಿಯರಿರಬಹುದು ಇಲ್ಲ, ಎಕ್ಸ್ ಟ್ರಾ ನಟಿಯರಿರಬಹುದು. ಕೆಲವೊಮ್ಮೆ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುವ ಪರಿಸ್ಥಿತಿಯನ್ನು ಕಥೆ ಚೆನ್ನಾಗಿ ಚಿತ್ರಿಸಿದೆ. ಅವರನ್ನು ಸ್ವಾರ್ಥಕ್ಕೆ ಬಳಸಿಕೊಂಡು ನಂತರ ಕಂಡು ಕಾಣದವರಂತೆ ಇದ್ದು ಬಿಡುವ ಕೆಲ ಮಂದಿಯ ಉಡಾಫೆತನವನ್ನೂ ಮನದಟ್ಟು ಮಾಡಿದೆ.

—ಶಂಕರೇಗೌಡ ತುಂಬಕೆರೆ, ಮಂಡ್ಯ

ಪರಿಸ್ಥಿತಿ ಮನುಷ್ಯನಿಂದ ಏನು ಬೇಕಾದರೂ ಮಾಡಿಸುವುದು ಎನ್ನುವುದಕ್ಕೆ ಸರಸು ಒಂದು ಉದಾಹರಣೆ. ಹಣದ ಆಸೆಗಾಗಿ ತನ್ನ ಜೀವವನ್ನೇ ಒತ್ತೆಯಿಡಲು ನಿರ್ಧರಿಸಿದ ಸರಸುವಿಗೆ ಸಿಕ್ಕಿದ್ದು ಕೆಲ ದಿನಗಳ ಸುಖ; ಸ್ವಲ್ಪ ಹಣ. ತನ್ನ ರಕ್ತ ಮಾಂಸ ಹಂಚಿಕೊಂಡು ಹುಟ್ಟಿದ ಮಗು ಗಂಡೋ ಹೆಣ್ಣೋ ಎಂದೂ ತಿಳಿಯುವ ಹಕ್ಕಿಲ್ಲದ ಬಾಡಿಗೆ ತಾಯಿಯ ವೇದನೆಯನ್ನು ಮನಮುಟ್ಟಿಸುವ ಕತೆ.

—ಪ್ರಭಾ ಎಸ್. ಮಗಂಟಿ

ಕಣ್ಣೀರು ಗೊತ್ತಿಲ್ಲದೇ ಹೊರಬಂದವು. 'ಕೆಲಸ ಮುಗಿದ ಮೇಲೆ...' ಗಾದೆ ನೆನಪಾಯಿತು. 'ಎಕ್ಸ್ಟ್ರಾ ನಟರಿಗೆಲ್ಲ ಗಾಡಿ ಕಳುಹಿಸಿದರೆ ನಿರ್ಮಾಪಕ ಗೋವಿಂದ...' ನಟಿಯ ಚಪ್ಪಲಿ ತೊಡಸಲೂ ಹಿಂಜರಿಯದ ನಿರ್ಮಾಪಕ ನಿರ್ದೇಶಕರು ಈ ಬಡಪಾಯಿಗಳಿಗೆ ಕನಿಷ್ಠ ಸೌಕರ್ಯ ಕೊಡಬಾರದೇ?

—ಬಸವರಾಜ್ ಹರಿಹರ, ಧಾರವಾಡ

ಉಷಾ ರಾಣಿ ಅವರ ಸಣ್ಣ ಕಥೆ ಎಕ್ಸ್ ಟ್ರಾ ನಟಿ ಸರಸುವಿನ ಪಾತ್ರದ ಬವಣೆಗಳನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ ಲೇಖಕಿ.

—ಮಂಜುಳಾ ಅಮರನಾಥ